**S.C. 67/2021.**

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

**<u>ಸತ್ರ ಮೊಕದ್ದಮೆ ಸಂಖ್ಯೆ: 67/2021.</u>**

| | | | |
|---|---|---|---|
| ಹೆಸರು | : | ಶರಣಬಸಪ್ಪ ಆಜೂರ | ಫ್ರಾಸಾ-11 |
| ತಂದೆಯ ಹೆಸರು | : | ಬಸಗೊಂಡ | ಚಾಸಾ-22 |
| ವಯಸ್ಸು | : | 41 ವರ್ಷ | |
| ಉದ್ಯೋಗ | : | ಸಿ.ಪಿ.ಐ | |
| ವಾಸಸ್ಥಳ | : | ಹುನಗುಂದ | |

ದಿನಾಂಕಃ 18-07-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ನಾನು ದಿನಾಂಕಃ 04-08-2016 ರಿಂದ 06-08-2018 ರವರೆಗೆ ಹುನಗುಂದ ಪೊಲೀಸಠಾಣೆಯಲ್ಲಿ ಪಿ.ಎಸ್.ಐ ಅಂತಾ ಸೇವೆ ಸಲ್ಲಿಸಿದ್ದೇನೆ.

ದಿನಾಂಕಃ 08-04-2017 ರಂದು ಚಾಸಾ-21 ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿ, ದಿನಾಂಕಃ 20-05-2017 ರಂದು ಮೃತನ ಕೈಬರಹವಿರುವ ನೋಟ್ ಪುಸ್ತಕವನ್ನು ಚಾಸಾ-9 ಹಾಜರುಪಡಿಸಿದ್ದು ಚಾಸಾ-4 ಮತ್ತು 5 ರ ಸಮಕ್ಷಮ ಪೊಲೀಸಠಾಣೆಯಲ್ಲಿ ಪಂಚನಾಮೆ ಜರುಗಿಸಿ ಅಮಾನತುಪಡಿಸಿಕೊಂಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-15 ಅಂತಾ ಗುರುತಿಸಲಾಗಿದ್ದು ಸಹಿಯನ್ನು ನಿಪಿ-15(ಬಿ) ಅಂತಾ ಗುರುತಿಸಲಾಯಿತು. ನೋಟ್ ಪುಸ್ತಕ ನಿಪಿ-11 ನ್ನು ನೋಡಿ ಗುರುತಿಸಿದ್ದೇನೆ. ಕೈಬರಹದ ಪರಿಶೀಲನೆಗಾಗಿ ನೋಟ್ ಪುಸ್ತಕ ಜಪ್ತ ಮಾಡಿದ್ದೇನೆ.

ದಿನಾಂಕಃ 05-07-2017 ರಂದು ನಿಪಿ-10,15 ನ್ನು ಸಿಪಿಸಿ-473 ರವರಿಂದ ಎಫ್.ಎಸ್.ಎಲ್, ಬೆಂಗಳೂರಿಗೆ ಕಳುಹಿಸಿದ್ದೇನೆ. ಅವರನ್ನು ಸಾಕ್ಷಿಯನ್ನಾಗಿ ನಮೂದಿಸಿಲ್ಲ. ಎಫ್.ಎಸ್.ಎಲ್ ಗೆ ಕಳುಹಿಸಿದ ಬಗ್ಗೆ ಸ್ವೀಕೃತಿಯನ್ನು ನನ್ನ ಮುಂದೆ ಹಾಜರುಪಡಿಸಿಲ್ಲ.

ದಿನಾಂಕಃ 06-08-2018 ರಂದು ನನಗೆ ವರ್ಗಾವಣೆಯಾಗಿರುವುದರಿಂದ ಸದರಿ ಪ್ರಕರಣದ ಕಡತವನ್ನು ಚಾಸಾ-23 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಬಿ.ಬಿ.ಎಂ ವಕೀಲರಿಂದ.**

ನಾನು ಈ ಕೇಸನ ತನಿಖೆ ಪಡೆದುಕೊಂಡು, ಮೃತನ ಮನೆಗೆ ಭೇಟಿ ನೀಡಿಲ್ಲ. ಮೃತ ಪ್ರಭಾಕರ ಎಷ್ಟು ಸಾಲ ಮಾಡಿದ್ದ ಹಾಗೂ ಯಾರ ಹತ್ತಿರ ಸಾಲ ಮಾಡಿದ್ದ ನಾನು ವಿಚಾರಣೆ ಮಾಡಿಲ್ಲ. ಮೃತನ ಹೆಸರಿನಲ್ಲಿ ಎಷ್ಟು ಲಾರಿಗಳಿದ್ದವು, ಯಾವ ಬ್ಯಾಂಕಿನಿಂದ ಲೋನ್ ಪಡೆದಿದ್ದ ನಾನು ವಿಚಾರಣೆ ಮಾಡಿಲ್ಲ. ಆರೋಪಿ ಟ್ರಾನ್ಸಪೋರ್ಟ ವ್ಯವಹಾರದಲ್ಲಿ ಪಾಲುದಾರನಿದ್ದ ಬಗ್ಗೆ ನನ್ನ ತನಿಖೆಯಲ್ಲಿ ದಾಖಲಾತಿ ಪಡೆದಿಲ್ಲ. ಆರೋಪಿಯಿಂದ ಪ್ರಭಾಕರ ಎಷ್ಟು ಸಾಲ ಮಾಡಿದ್ದ ಹಾಗೂ ಎಷ್ಟು ಹಣ ಮರಳಿ ನೀಡಿದ್ದ ಎಂಬ ಬಗ್ಗೆ ತನಿಖೆ ಮಾಡಿಲ್ಲ ಹಾಗೂ ದಾಖಲೆಗಳನ್ನು ಪಡೆದಿಲ್ಲ. ಆರೋಪಿ ಮೃತ ಪ್ರಭಾಕರನ ಜೊತೆಗೆ ಪಾಲುದಾರನಿದ್ದ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನನ್ನ ತನಿಖೆಯಲ್ಲಿ ಪಡೆದಿಲ್ಲ.

ಪ್ರಭಾಕರನ ಟ್ರಾನ್ಸಪೋರ್ಟ ವ್ಯವಹಾರದ ಆಡಿಟ್ ರಿಪೋರ್ಟ ಹಾಗೂ ಯಾವುದೇ ಲೆಡ್ಜರಗಳನ್ನು ಅಮಾನತುಪಡಿಸಿಕೊಂಡಿಲ್ಲ ಹಾಗೂ ಟ್ರಾನ್ಸಪೋರ್ಟ ಏಜೆನ್ಸಿಯಲ್ಲಿ ಪ್ರಭಾಕರ ವಾರ್ಷಿಕವಾಗಿ ಎಷ್ಟು ಹಣ ಗಳಿಸುತ್ತಿದ್ದ ಹಾಗೂ ಎಷ್ಟು ಹಣ ಖರ್ಚು ಮಾಡುತ್ತಿದ್ದ ಎಂದು ತನಿಖೆ ಮಾಡಿಲ್ಲ.

ಡೆತ್ ನೋಟ್‌ನ್ನು ನಾನು ಠಾಣೆಯಲ್ಲಿದ್ದಾಗ ಚಾಸಾ-9 ಹಾಜರುಪಡಿಸಿದ್ದಾರೆ, ನಾನು ಡೆತ್ ನೋಟ್‌ನ್ನು ಲಾಡ್ಜನ ರೂಮಿನಲ್ಲಿ ಅಮಾನತುಪಡಿಸಿಕೊಂಡಿಲ್ಲ. ನಿಪಿ-10 ಡೆತ್ ನೋಟ್‌ನಲ್ಲಿಯ ಮೃತನ ಸಹಿ ಮತ್ತು ಲಾಡ್ಜನವರು ನೀಡಿದ ರಶೀದಿ ಮೇಲಿನ ಸಹಿಗಳು ಬೇರೆ ಬೇರೆ ಇವೆ ಎನ್ನುವುದು ನಿಜ. ಸದರಿ ಸಹಿಗಳು ಬೇರೆ ಇರುವುದರಿಂದ ನಿಪಿ-10 ಮತ್ತು ಲಾಡ್ಜನ ರಶೀದಿ ಮೇಲಿನ ಸಹಿಯನ್ನು ಕೈಬರಹ ತಜ್ಞರ ಬಳಿಗೆ ಕಳುಹಿಸಿ ಕೈಬರಹ ತಜ್ಞರ ಅಭಿಪ್ರಾಯ ಪಡೆದಿಲ್ಲ.

ದಿನಾಂಕಃ 20-05-2017 ರಂದು ಚಾಸಾ-9 ಡೆತ್ ನೋಟ್ ಹಾಜರುಪಡಿಸಿದ, ಅದನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಎಫ್.ಎಸ್.ಎಲ್ ಗೆ ನಿಪಿ-10 ಮತ್ತು ನೋಟ್ ಪುಸ್ತಕ ಕಳುಹಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಕೇಸಗಾಗಿ ಡೆತ್ ನೋಟ್ ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

18-07-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.